# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ.

## ಸಿ.ಸಿ ನಂ.ಃ 289/2013

ಪಿರ್ಯಾದುದಾರರು ಃ- ಚನ್ನರಾಯಪಟ್ಟಣ ನಗರ ಪೋಲೀಸರು.

**ವಿರುದ್ಧ**

ಆರೋಪಿ ಃ- ಮೋಹನ್‌ಕುಮಾರ್

ಎಂ.ಎಸ್. ಶಶಿಕಲಾ, ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಿಸುತ್ತೇನೆ.

ಮೋಹನ್‌ಕುಮಾರ್ ಬಿನ್ ಲೇಟ್ ನಿಂಗಪ್ಪ, 58 ವರ್ಷ<br>
ಜನಿವಾರ ಗ್ರಾಮ, ಕಸಬಾ ಹೋಬಳಿ,<br>
ಚನ್ನರಾಯಪಟ್ಟಣ ತಾಲ್ಲೂಕು.

## -ಃ ದೋಷಾರೋಪಣೆ ಃ-

ದಿನಾಂಕಃ 6-11-2012 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಠಾಣಾ ಸರಹದ್ದಿಗೆ ಸೇರಿದ ಚನ್ನರಾಯಪಟ್ಟಣ ತಾಲ್ಲೂಕು ಕಸಬಾ ಹೋಬಳಿ, ಜನಿವಾರ ಗ್ರಾಮದಲ್ಲಿ ಸಾಕ್ಷಿ-1 ರವರು ತಮ್ಮ ಬಾಬ್ತು ಅಂಗಡಿಯಲ್ಲಿದ್ದಾಗ ಪಕ್ಕದ ಮನೆಯವರಾದ ಆರೋಪಿಯವರ ಮನೆಯಿಂದ ತಮ್ಮ ಮಂಜುನಾಥರವರ ಮಗು ಬಾಲನ್ನು ತಮ್ಮ ಮನೆಯ ಕಡೆಗೆ ಎಸೆದು ಆಗಾಗ್ಗೆ ತೆಗೆದುಕೊಂಡು ಹೋಗಲು ಬರುತ್ತಿದ್ದು ಸಾಕ್ಷಿ-1 ರವರು ಮಗುವಿಗೆ ಬೈದು ನಿಮ್ಮ ಅಪ್ಪ ಕರೆದುಕೊಂಡು ಬಾ ಎಂದು ಹೇಳಿ ಕಳುಹಿಸಿದಾಗ ಆರೋಪಿಯು ಹಳೆಯ ದ್ವೇಷ ಇಟ್ಟುಕೊಂಡು ಮಗುವಿಗೆ ಯಾಕೆ ಬೈದು ಕಳುಹಿಸಿದೆ ಎಂದು ಬೋಳಿ ಮಗನೆ, ನೀನು ಯಾವನೋ ಅವರಪ್ಪನ್ನು ಕರೆದುಕೊಂಡು ಬಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡುವುದಕ್ಕಾಗಿ ಉದ್ದೇಶ ಪೂರ್ವಕವಾಗಿ ಉದ್ರೇಕಿಸಿ ಭಾರತೀಯ ದಂಡ ಸಂಹಿತೆ ಕಲಂ **504** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರ ಜೊತೆ ಜಗಳ ತೆಗೆದು, ಚಾಕುವಿನಿಂದ ಸಾಕ್ಷಿ-1 ರವರ ಹೊಟ್ಟೆಗೆ ಹೊಡೆದು, ಜಗಳ ಬಿಡಿಸಲು ಬಂದ ಸಾಕ್ಷಿ-2 ರವರಿಗೆ ಕಾಪಲಕ್ಕೆ ಚಾಕುವಿನಿಂದ ಹೊಡೆದು ಗಾಯಪಡಿಸಿ ಭಾರತೀಯ ದಂಡ ಸಂಹಿತೆ ಕಲಂ **326** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರವರ ಜೊತೆ ಜಗಳ ತೆಗೆದು, ಸಾಕ್ಷಿ-3 ರವರಿಗೆ ಎಡರಟ್ಟೆಗೆ ಹೊಡೆದು ಗಾಯಪಡಿಸಿ ಭಾರತೀಯ ದಂಡ ಸಂಹಿತೆ ಕಲಂ **324** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ರಿಂದ 3 ರವರೆಗಿನ ಸಾಕ್ಷಿದಾರರುಗಳಿಗೆ ಈ ದಿನ ಬದುಕಿದ್ದೀರಿ ಇನ್ನೊಂದು ದಿನ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಅಪರಾಧಿಕ ಭಯೋತ್ಪಾದನೆ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಮೇಲೆ ಹೇಳಿದ ಆಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸತಕ್ಕದೆಂದು ನಿರ್ದೇಶಿಸುತ್ತೇನೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ.**

**ಸಿ.ಸಿ ನಂ.ಃ 289/2013**

ಪಿರ್ಯಾದುದಾರರು ಃ- ಚನ್ನರಾಯಪಟ್ಟಣ ನಗರ ಪೋಲೀಸರು.

**ವಿರುದ್ಧ**

ಆರೋಪಿ ಃ- ಮೋಹನಕುಮಾರ

ಪ್ರಶ್ನೆ.1ಃ ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಗಳು ತಿಳಿಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ.2ಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪವನ್ನು ಆರೋಪಿಗೆ ಅರ್ಥವಾಗುವ ರೀತಿಯಲ್ಲಿ ಓದಿ ಹೇಳಿ, ವಿವರಿಸಿ ನಿಜವಾದ ಮತ್ತು ಸರಿಯಾದ ಹೇಳಿಕೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.